ಶ್ರೀ ಸಿ.ಬಿ. ಸುರೇಶ್ ಬಾಬು :– ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದ್ದರೆ ಆ ಸಮಸ್ಯೆ ಬಗೆಹರಿಸುವುದಕ್ಕೆ ತಾವು ಏನಾದರೊಂದು ಕ್ರಮ ತೆಗೆದುಕೊಂಡರೆ ಒಳ್ಳೆಯದು. ಆ ಬಗ್ಗೆ ಗಮನಹರಿಸಿ ಎಂದು ತಮ್ಮನ್ನು ಕೇಳುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಅಲ್ಲಿ ಅಗತ್ಯವಿರುವ ಶೌಚಾಲಯವನ್ನು ಒದಗಿಸುವುದಕ್ಕೆ ಆದ್ಯತೆಯಿಂದ ನಮ್ಮ ಗಮನಹರಿಸುತ್ತೇವೆ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು :

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 28–3–2012ರ 3ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 79 ಪ್ರಶ್ನೆಗಳ ಪೈಕಿ 53 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಅನುಬಂಧ –1)

2. ಸಭಾಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ : ಎತ್ತಿನಹೊಳೆ ಯೋಜನೆಯನ್ನು ಜಾರಿ ಮಾಡುವ ಬಗ್ಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಈ ಸಾರಿ ಆಯವ್ಯಯ ಮಂಡನೆ ಮಾಡಿದ ಕಾಲದಲ್ಲಿ ಎತ್ತಿನಹೊಳೆ ಯೋಜನೆಯನ್ನು ಜಾರಿ ಮಾಡುತ್ತೇವೆಂದು ಹೇಳಿ ಹಣ ನಿಗದಿಪಡಿಸಿದ್ದಾರೆ. ಇದು ಬಹಳ ಸಂತೋಷಕರವಾದ ವಿಚಾರ. ಅರಸೀಕೆರೆ ತಾಲ್ಲೂಕು ಕೃಷ್ಣಾ ಬೇಸಿನ್‌ಗೆ ಸೇರುತ್ತದೆ. ದಯವಿಟ್ಟು ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಾವು ಕಾವೇರಿ ಬೇಸಿನ್‌ನಲ್ಲಿಲ್ಲ. ಹಾಸನ ಜಿಲ್ಲೆಯಲ್ಲಿ ನಮ್ಮದೊಂದು ತಾಲ್ಲೂಕು ಕೃಷ್ಣಾ ಬೇಸಿನ್‌ಗೆ ಬರುವುದರಿಂದ, ನಮಗೆ ಹೇಮಾವತಿ ನದಿ ಮೂಲದಿಂದ ಕಾನೂನು ಚೌಕಟ್ಟಿನಲ್ಲಿ ನೀರು ಹರಿಸಲಿಕ್ಕೆ ಸಾಧ್ಯವಿಲ್ಲ. ಆದರೆ ಕೃಷ್ಣಾ ಬೇಸಿನಿಂದ ನಾವು ನೀರು ತರಲಿಕ್ಕೆ ಆಗುವುದಿಲ್ಲ. ಏಕೆಂದರೆ, ನಮಗೆ 400–500 ಕಿ.ಮೀ. ಆಗುತ್ತದೆ. ಆದ್ದರಿಂದ ದಯವಿಟ್ಟು ನಮ್ಮ ಎತ್ತಿನಹೊಳೆ ಯೋಜನೆಗೆ ತುಮಕೂರು ಗ್ರಾಮೀಣ, ತುಮಕೂರು, ತಿಪಟೂರು ಎಲ್ಲಾ ಕಡೆ ಕೊಡುತ್ತಿದ್ದೀರಿ. ನಮ್ಮ ಅರಸೀಕೆರೆ ಕ್ಷೇತ್ರವನ್ನು ಸಹ ಆ

ಎತ್ತಿನಹೊಳೆ ಯೋಜನೆಗೆ ಒಳಪಡಿಸಿಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಮತ್ತು ಜಲ ಸಂಪನ್ಮೂಲ ಸಚಿವರನ್ನು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಸಚಿವರು) : (ಜಲಸಂಪನ್ಮೂಲ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು, ಶೂನ್ಯವೇಳೆಯಲ್ಲಿ ಅರಸೀಕೆರೆಯಲ್ಲಿ ಎತ್ತಿನಹೊಳೆಯನ್ನು ಅಳವಡಿಸುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎತ್ತಿನಹೊಳೆ is a project, it is about a scheme. ನಾನು ಸಂಬಂಧಪಟ್ಟ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರ ಗಮನಕ್ಕೆ ತಂದು, ಅವರಿಂದ ಅಗತ್ಯವಾದ statement ಮಾಡಿಸುತ್ತೇನೆ. ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿ ಈಗಲೇ ಎತ್ತಿನಹೊಳೆ ಯೋಜನೆ ಬಗ್ಗೆ ಉತ್ತರ ಕೊಡಿ ಎಂದರೆ ಕಷ್ಟವಾಗುತ್ತದೆ.

2. ವಿಷಯ : ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಯಲ್ಲಿ ಅಡಿಕೆ ಬೆಳಗಾರರು ತೊಂದರೆಗೆ ಒಳಗಾಗಿದ್ದು ಪರಿಹಾರ ಪ್ಯಾಕೇಜ್ ಘೋಷಣೆ ಮಾಡುವ ಬಗ್ಗೆ.

ಶ್ರೀ ಯು.ಟಿ. ಖಾದರ್(ಮಂಗಳೂರು):– ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ, ಉಡುಪಿ ಹಾಗೂ ಕೊಡಗು ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಾರರು ಬಹಳ ವರ್ಷಗಳಿಂದ ತೊಂದರೆಗೊಳಗಾಗಿದ್ದಾರೆ. ಅದು ಪ್ರಕೃತಿ ವಿಕೋಪವಿರಲಿ, ಕ್ಷೋಭೆ ಇರಲಿ ಅಥವಾ ಬೇರೆ ಬೇರೆ ಕಾರಣಗಳಿಂದ ಇರಲಿ. ಅದಕ್ಕೆ ಸರಿಯಾದ ಪರಿಹಾರ ಕೊಡುವ ವ್ಯವಸ್ಥೆಯಾಗಲಿಲ್ಲ. ತೋಟಗಾರಿಕೆ ಇಲಾಖೆಯಿಂದ ವರದಿ ತರಿಸಿಕೊಳ್ಳುತ್ತೇವೆಂದು ಸರ್ಕಾರ ಹೇಳಿತ್ತು. ಮಾನ್ಯ ಮುಖ್ಯಮಂತ್ರಿಯವರು ಕೂಡ ಅವರಿಗೆ package ಘೋಷಣೆ ಮಾಡುತ್ತೇವೆಂದು ಹೇಳಿದ್ದಾರೆ. ಈ ಬಜೆಟ್‌ನಲ್ಲಿ ಅವರಿಗೆ ಯಾವುದೇ ಪರಿಹಾರ ಕೊಡಲಿಲ್ಲ. ಬಹುಶಃ ಮಾನ್ಯ ಮುಖ್ಯಮಂತ್ರಿಯವರೂ ಕೂಡ ಅಡಿಕೆ ಬೆಳೆಗಾರರೇ. ತಾವೂ ಕೂಡ ಅಡಿಕೆ ಬೆಳೆಗಾರರೇ. ನಮ್ಮ Deputy Speker ರವರು ಸಹ ಅಡಿಕೆ ಬೆಳೆ ಬೆಳೆಯುವ ಪ್ರದೇಶದಿಂದ ಬಂದವರು. ಅಡಿಕೆ ಬೆಳೆಗಾರರಿಗೆ ಇಂಥ ವಾತಾವರಣ ದಕ್ಷಿಣ ಕನ್ನಡ ಜಿಲ್ಲೆಯವರಿಗೆ ಸಿಗಲಿಕ್ಕಿಲ್ಲ. ಆದಕಾರಣ ಸರ್ಕಾರ ದಕ್ಷಿಣ ಕನ್ನಡ, ಉಡುಪಿ, ಕರಾವಳಿ ಹಾಗೂ ಕೊಡಗು ಪ್ರದೇಶದ ಅಡಿಕೆ ಬೆಳೆಗಾರರಿಗೆ ಸೂಕ್ತವಾದ, ಅದು ಪ್ರಕೃತಿ ವಿಕೋಪವಿರಲಿ, ಹಳದಿ ರೋಗವಿರಲಿ, ಬೇರೆ ಬೇರೆ ಕಾರಣವಿರಲಿ, ಯಾವ ಕಾರಣದಿಂದ ನಷ್ಟವಾಗಿದೆ ಅದಕ್ಕೆ ಪರಿಹಾರ ಕೊಡಬೇಕು.